೨೨೬೨

# ದಾದಾಭಾಯಿ ನವರೋಜಿಯವರ ಜೀವನ ಚರಿತ್ರವು.

ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ,
ಬೆಂಗಳೂರು-೧೮.

V,೨ಆM೨೫
N
2262
೨೨೬೨

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY

63
A-2262

ಮಹಾ ಪುರುಷ ಚರಿತಾವಳಿ

೧

# Dadabhai Naoroji

# ದಾದಾಭಾಯಿ ನೌರೋಜಿಯವರ

ಜೀವನ ಚರಿತ್ರವು

ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ
ಬೆಂಗಳೂರು-೧೮.

ಜೆ. ರುದ್ರಪ್ಪನವರಿಂದ

ರಚಿಸಲ್ಪಟ್ಟುದು

ಕರ್ಣಾಟಕ ಸಾಹಿತ್ಯ ಪರಿಷತ್ತು
2262 ಪುಸ್ತಕ ಭಂಡಾರ
ಕ್ರಮ ಸಂಖ್ಯೆ 1917 ವರ್ಗ ಸಂಖ್ಯೆ
ತಾರೀಖು
ಬೆಲೆ
145

(Copyright Registered)

Price 2 As.] [ಬೆಲೆ ೨ ಆಣೆ.

Digitized by ROJA MUTHIAH RESEARCH LIBRARY

A · 2263

Printed at
THE GURUVILAS PRINTING WORKS,
Bangalore City.

V, ೩೭M25 N

## ಸಮರ್ಪಣಂ

“ಮಾತೃದೇವೋಭವ” ಎನ್ನುವಂತೆ ಪ್ರತ್ಯಕ್ಷದೈವಸ್ವರೂಪೆಯಾದ ತಾಯಿಯ ಮಹೋಪಕಾರವನ್ನು ಸೇವಾಮೂಲಕವಾಗಿ ತೀರಿಸಿ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಲು ಮಾತೃವಿಯೋಗದಿಂದ ಅವಕಾಶವು ದೊರೆಯದಿದ್ದುದಕ್ಕಾಗಿ ತುಂಬಾ ವಿಷಾದಗೊಂಡು, ವಿದ್ಯಾಭ್ಯಾಸವಿಚಾರದಲ್ಲಿ ಹೆಚ್ಚಾದ ಆಸಕ್ತಿಯನ್ನು ಪ್ರದರ್ಶಿಸಿ ಆನುಕೂಲ್ಯಗಳನ್ನು ಕಲ್ಪಿಸಿಕೊಡುತಿದ್ದ ಆ ತಾಯಿಯ ಚರಣಾರವಿಂದಗಳಲ್ಲಿ ಈ ಪುಟ್ಟ ಪುಸ್ತಕವು ಗ್ರಂಥಕರ್ತನಿಂದ ಭಕ್ತಿಪುರಸ್ಸರವಾಗಿ ಸಮರ್ಪಿಸಲ್ಪಟ್ಟಿರುವುದು.

Digitized by ROJA MUTHIAH RESEARCH LIBRARY

# ಉಪೋದ್ಘಾತವು.

ಕರ್ಣಾಟಕ ಭಾಷೆಯಲ್ಲಿ ಮಹನೀಯರ ಜೀವನ ಚರಿತ್ರೆಗಳೇ ವಿರಳ. ಅದರಲ್ಲಿಯೂ ದೇಶೋದ್ಧಾರಕರ ಚರಿತ್ರೆಗಳು ಇನ್ನೂ ವಿರಳ. ಇದಕ್ಕಾಗಿ ದೇಶೋದ್ಧಾರಕರಲ್ಲಿ ಅಗ್ರಗಣ್ಯರಾದ ದಾದಾಭಾಯಿ ನೌರೋಜಿಯವರ ಜೀವನ ಚರಿತ್ರೆಯನ್ನು ತಿಳಿಯಬೇಕಾದುದು ಅತ್ಯಾವಶ್ಯಕವು. ಈ ಮಹಾಪುರುಷರು ಭರತಖಂಡದ ಪುರೋಭಿವೃದ್ಧಿಯನ್ನುದ್ದೇಶಿಸಿ ಮಾಡಿದ ಸೇವಾ ಮಹತ್ತ್ವವನ್ನು ಭಾರತೀಯರಲ್ಲಿ ಅನೇಕರು ಇನ್ನೂ ಚೆನ್ನಾಗಿ ಅರಿಯರು. ಇವರ ಚರಿತ್ರೆಯು ನಾನಾಭಾಷೆಗಳಲ್ಲಿ ಬರೆಯಲ್ಪಟ್ಟಿರುವುದರಿಂದಲೇ ಇವರ ಜೀವಿತದ ಪವಿತ್ರತೆಯು ವ್ಯಕ್ತವಾಗುವುದು. ಕನ್ನಡಿಗರೂ ಇಂತಹ ದೇಶಸೇವಾಮಹಿಮೆಯ ಲೇಶಾಂಶವನ್ನಾದರೂ ಪಡೆದು ಕೃತಕೃತ್ಯರಾಗಬಹುದೆನ್ನುವ ನಂಬುಗೆಯಿಂದ ಈ ಪುಸ್ತಕವನ್ನು ಕನ್ನಡಿಗರ ಮುಂದಿಟ್ಟಿರುವೆನು. ಇಂತಹ ಚರಿತ್ರೆಗಳನ್ನೋದುವುದರಿಂದ, ಮನುಷ್ಯನು ತಾನು ಈ ಲೋಕದಲ್ಲಿ ಜನಿಸಿದುದಕ್ಕೆ ಸಾರ್ಥಕವೇನೆನ್ನುವುದನ್ನು ಆಲೋಚಿಸುವುದಕ್ಕೂ, ಆಮೂಲಕವಾಗಿ ತಮ್ಮ ತಮ್ಮ ದೇಶಸೇವೆಯನ್ನು ಯಾವ ಯಾವ ಬಗೆಯಿಂದ ಮಾಡಿದರೆ ತಮ್ಮ ರಾಜ್ಯದ ಪ್ರಜೆಗಳು ಸಂಪತ್ತಿನಿಂದಲೂ, ನೀತಿಯಿಂದಲೂ, ಪಾಪಭೀತಿಯಿಂದಲೂ, ದೈವಭಕ್ತಿಯಿಂದಲೂ ಕೂಡಿದವರಾಗಿ ತಮ್ಮ

Digitized by ROJA MUTHIAH RESEARCH LIBRARY

ಮಕ್ಕಳನ್ನೂ ಕರ್ತವ್ಯಜಾಗರೂಕತೆಯಿಂದಿರುವಂತೆ ಎಚ್ಚರಿಸಲು ಸಹಕಾರಿಯಾಗಬಹುದೋ ಅಂತಹ ಸಂಪೂರ್ಣಫಲವು ಇಂತಹ ಜೀವನ ಚರಿತ್ರೆಗಳಿಂದಲೇ ಉಂಟಾಗಬೇಕಾಗಿರುವುದು. ಈ ಬಗೆಯ ಚರಿತ್ರೆಗಳನ್ನು ನನಗಿಂತಲೂ ಪಂಡಿತರಾದವರು ಬರೆಯಬೇಕಾದುದು ಆವಶ್ಯಕವಾದರೂ, ನನ್ನ ಕುತೂಹಲವನ್ನೂ ವ್ಯರ್ಥಗೊಳಿಸಬಾರದೆಂದು ಅಲ್ಪಜ್ಞತೆಗೆ ತಕ್ಕಂತೆ ಪ್ರಯತ್ನಿಸಿರುವೆನು. ಈ ಕೆಲಸದಲ್ಲಿ ಇಂದೇ ಮುಂದುವರಿದಿರುವುದರಿಂದ ಆವ ಲೋಪಗಳಿದ್ದರೂ ಮನ್ನಿಸಿ ಪ್ರೋತ್ಸಾಹಿಸಬೇಕೆಂದು ಪ್ರಾರ್ಥಿಸುವೆನು.

ಈ ಪುಸ್ತಕವನ್ನು ಆಮೂಲಾಗ್ರವಾಗಿ ಓದಿ ಅಲ್ಲಲ್ಲಿ ಸಂದರ್ಭಕ್ಕೆ ತಕ್ಕಂತೆ ಸರಿಪಡಿಸಿಕೊಟ್ಟ ಶ್ರೀಯುತ ಕ್ಲೋಸ್‌ಪೇಟೆ, ಆರ್. ಶ್ರೀನಿವಾಸರಾಯರವರಲ್ಲಿ ಅತ್ಯಂತ ಕೃತಜ್ಞನಾಗಿರುವೆನು.

ಗ್ರಂಥಕರ್ತೃ.

ಶ್ರೀಃ

# Dadabhai Naoroji

# ದಾದಾಭಾಯಿ ನೌರೋಜಿಯವರ

## ಜೀವನ ಚರಿತ್ರವು

---

### ಪೂರ್ವಪೀಠಿಕಾ

ವಿಪದಿ ಧೈರ್ಯಮಥಾಭ್ಯುದಯೇ ಕ್ಷಮಾ ।
ಸದಸಿ ವಾಕ್ಪಟುತಾ ಯುಧಿ ವಿಕ್ರಮಃ ॥
ಯಶಸಿ ಚಾಭಿರುಚಿರ್ವ್ಯಸನಂ ಶ್ರುತೌ ।
ಪ್ರಕೃತಿಸಿದ್ಧಮಿದಂ ಹಿ ಮಹಾತ್ಮನಾಂ ॥

ಸರ್ವಸಂಪದ್ಭರಿತವಾದ ಭರತಖಂಡದಲ್ಲಿ ಚಿರಕಾಲದವರೆಗೂ ಅಸದೃಶವಾದ ದೇಶಸೇವೆಯನ್ನು ಮಾಡಿ ದೇಶಹಿತೈಷಿಗಳೆಲ್ಲರಿಗೂ ತಮ್ಮ ಪರಮಪವಿತ್ರವಾದ ಜೀವನಚರಿತವನ್ನು ಆದರ್ಶವಾಗಿಟ್ಟು ವೃದ್ಧಪ್ರಪಿತಾಮಹರೆಂದು ಪ್ರಖ್ಯಾತಿಗೊಂಡ ದಾದಾಭಾಯಿ ನೌರೋಜಿಯವರು ಅವತಾರಪುರುಷರೆಂದರೆ ಅತಿಶಯೋಕ್ತಿಯಾಗದು. ಈಗಳೂ ಪಾರಸೀಕರೂ ಇವರನ್ನು ತಮ್ಮ ಋಷಿಪಙ್ಕ್ತಿಯಲ್ಲಿ ಸೇರಿಸಿ ಪೂಜಿಸುತ್ತಿರುವರು. ಭಾರತೀಯ ಪ್ರಮುಖರಾದ ಅನೇಕರು ಇವರ ಪ್ರತಿಮೆಯನ್ನು ಪ್ರತಿಷ್ಠಿಸಲು

Digitized by ROJA MUTHIAH RESEARCH LIBRARY

ಪರಿಪರಿಯಿಂದ ಪ್ರಯತ್ನಿಸುತ್ತಿರುವರು. ಇವರ ಕೀರ್ತಿಯು ಭರತಖಂಡದಲ್ಲಲ್ಲದೆ ಆಂಗ್ಲಚಕ್ರಾಧಿಪತ್ಯದಲ್ಲೆಲ್ಲಾ ಹರಡಿರುವುದನ್ನು ನೋಡಿದರೆ ಇವರು ಸಾಮಾನ್ಯಪುರುಷರಲ್ಲವೆನ್ನುವಂತೆಯೇ ವ್ಯಕ್ತವಾಗುವುದು. ಇಂತಹ ಮಹನೀಯರು ನಮ್ಮ ರಾಷ್ಟ್ರದಲ್ಲಿಯೇ ಜನಿಸಿ ನಮ್ಮ ರಾಷ್ಟ್ರದಲ್ಲಿಯೇ ಬಳೆದು ನಮ್ಮ ರಾಷ್ಟ್ರಕ್ಕೇ ಅಮೋಘವಾದ ಸಾಹಾಯ್ಯವನ್ನು ಮಾಡಿದ್ದರೂ ಇನ್ನೂ ಅವರ ಮೇಲ್ಬಂತಿಯನ್ನು ಅನುಸರಿಸಲು ಕನ್ನಡಿಗರು ಹೆಚ್ಚು ಹೆಚ್ಚಾಗಿ ಮುಂದುವರಿಯದಿರುವ ವಿಷಯದಲ್ಲಿ ವಿಷಾದಿಸಬೇಕಾಗಿರುವುದು.

ಭಾರತಮಾತೆಯು ಹಿಂದೆ ಎಷ್ಟೋಮಂದಿ ದೇಶಭಕ್ತರನ್ನು ಪಡೆದಿದ್ದರೂ, ನಮ್ಮ ನೌರೋಜಿಯವರಂತಹ ಉತ್ಸಾಹಿಗಳೂ, ವ್ಯಕ್ತಪ್ರತಿಭಾಶಕ್ತಿಯುಕ್ತರೂ, ಧೈರ್ಯಶಾಲಿಗಳೂ ಆದವರನ್ನು ಪಡೆದು ಪರಮಸಂತೋಷಭರಿತೆಯಾದಳೆಂದು ಹೇಳುವುದರಲ್ಲಿ ಅಡ್ಡಿಯೇನಿರುವುದು? ಇವರು ತಮ್ಮ ನಿಷ್ಕಲ್ಮಷವಾದ ಜ್ಞಾನದಿಂದಲೂ ಪರಿಶುದ್ಧವಾದ ನಡೆನುಡಿಗಳಿಂದಲೂ ಶ್ರೇಷ್ಠವಾದ ಪದವಿಯನ್ನಲಂಕರಿಸಿ ಪ್ರಪಂಚಕ್ಕೆಲ್ಲಾ "ದೇಶಭಕ್ತಿ"ಯೇ ಮುಖ್ಯವೆಂದು ಬೋಧಿಸಿರುವರು. ಇವರು ನ್ಯಾಯವಾದಿಗಳಾಗಿದ್ದಾಗ ಸ್ವಾರ್ಥತೆಯನ್ನು ತಳ್ಳಿ ಧರ್ಮಪಾಶದಿಂದ ಬದ್ಧ

Digitized by ROJA MUTHIAH RESEARCH LIBRARY



ರಾಗಿ ಸ್ವರಾಷ್ಟ್ರವೇ ಸ್ವಗೃಹವೆಂದು ಭಾವಿಸಿ ಲೋಕದ ಲೋಪಗಳನ್ನು ತಿದ್ದುವುದರಲ್ಲಿ ಬದ್ಧಾದರರಾದರು. ದೇಶಸೇವೆಗಾಗಿ ತಮ್ಮ ತನುಮನೋಧನಗಳನ್ನು ಸಮರ್ಪಿಸಿ ಇತರರಿಗೆ ಮಾರ್ಗದರ್ಶಿಗಳಾಗಿದ್ದುದರಿಂದ ಇವರಲ್ಲಿ ಜನರ ನಂಬುಗೆಯೂ, ಪ್ರೀತಿಯೂ ದಿನದಿನಕ್ಕೆ ಅಭಿವೃದ್ಧಿಯಾಗುತ್ತ ಬಂದುವು.

ನೌರೋಜಿಯವರು ಆತ್ಮಹಿತಕ್ಕೂ, ದೇಶೋದ್ಧಾರಕ್ಕೂ ತಕ್ಕ ಹಲವು ನಿಯಮಗಳನ್ನು ಕಲ್ಪಿಸಿಕೊಂಡು, ಎಂತಹ ಅಡಿಯೊದಗಿದರೂ ಎದೆಗುಂದದೆ ಅದರಂತೆಯೇ ನಡೆಯುತ್ತಿದ್ದರು. ಇವರ ಯಶಶ್ಚಂದ್ರಿಕೆಗೆ ಶಕ್ತಿ, ಉತ್ಸಾಹ, ಧೈರ್ಯ, ಸತ್ಯ ಮುಂತಾದುವುಗಳೇ ಕಿರಣಗಳಾಗಿ ಪರಿಣಮಿಸಿ ಪ್ರಪಂಚವನ್ನೆಲ್ಲಾ ಬೆಳಗಿಸಿದುದು ಆಶ್ಚರ್ಯವೇನೂ ಅಲ್ಲ. ಇವರು ನ್ಯಾಯವಾದುದನ್ನು ಅಂಗೀಕರಿಸುವುದಕ್ಕೂ, ಅನ್ಯಾಯವನ್ನು ಉದ್ಘಾಟಿಸುವುದಕ್ಕೂ ಎಂದಿಗೂ ಹಿಂದೆಗೆಯುತ್ತಿರಲಿಲ್ಲ. ಇದರಿಂದಲೇ ಎಂತಹರಿಗೂ ಇವರಲ್ಲಿ ಪೂಜ್ಯಬುದ್ಧಿಯು ಹುಟ್ಟುವುದಕ್ಕೆ ಅವಕಾಶವುಂಟಾಯಿತು.

## ಬಾಲ್ಯ ಮತ್ತು ವಿದ್ಯಾಭ್ಯಾಸ

ಬೊಂಬಾಯಿ ಪಟ್ಟಣದಲ್ಲಿ ಭರತಖಂಡದ ಕುಬೇರರೆಂದು ಪ್ರಖ್ಯಾತರಾದ ಪಾರಸೀಕರ ಗುರುವಂಶದಲ್ಲಿ ದಾದಾಭಾಯಿಯು

ವರು ಜನಿಸಿದರು. ಕ್ರಿಸ್ತಾಬ್ದ 1825 ನೆಯ ಸೆಪ್ಟಂಬರ್ 4ನೆಯ ತೇದಿಯು ಈ ಮಹನೀಯರ ಜನ್ಮದಿವಸವಾಗಿ ಶುಭದಿನವೆನಿಸಿತು. ಅಂತರಿಕ್ಷದಲ್ಲಿ ನಕ್ಷತ್ರವು ಚಿಕ್ಕದಾಗಿದ್ದರೂ ತನ್ನಬೆಳಗಿನಿಂದ ಹೇಗೆ ಪ್ರಕಾಶಿಸುತ್ತಿರುವುದೋ, ಹಾಗೆಯೇ ಈ ಭಾರತಭೂಮಿಯಲ್ಲಿ ನೌರೋಜಿಯವರು ಬಡವರಾಗಿ ಜನಿಸಿದ್ದರೂ ತಮ್ಮ ಪ್ರತಿಭಾಶಕ್ತಿಯಿಂದ ಲೋಕವನ್ನೆಲ್ಲಾ ಆಶ್ಚರ್ಯಗೊಳಿಸಿದರು. ನೌರೋಜಿಯವರ ನಾಲ್ಕನೆಯ ವಯಸ್ಸಿನಲ್ಲಿ ವಿಧಿಪರಿಪಾಕವು ವಿಪರಿಣಮಿಸಿತು. ಅಂತಹ ಅತಿಬಾಲ್ಯವಯಸ್ಸಿನಲ್ಲಿ ಪ್ರತ್ಯಕ್ಷದೈವಸ್ವರೂಪನಾದ ತಂದೆಯನ್ನು ಕಳೆದುಕೊಂಡು ಪಿತೃವಿಯೋಗದುಃಖಕ್ಕೆ ಭಾಗಿಯಾದುದು ವ್ಯಸನ ಜನಕವಾದ ವಿಷಯವೇ ಸರಿ. ಆದರೂ ತಾಯಿಯ ಹಸನ್ಮುಖತೆ, ಸತ್ಸ್ವಭಾವ, ಬುದ್ಧಿಚಾತುರ್ಯ, ಕರ್ತವ್ಯಾಸಕ್ತಿ ಇವೇ ಮೊದಲಾದ ಗುಣಗಳಿಂದ ನೌರೋಜಿಯವರಿಗೆ ದಿನದಿನಕ್ಕೆ ಪಿತೃವಿಯೋಗದುಃಖವು ಕಡಿಮೆಯಾಗುತ್ತ ಬಂದಿತು. ಸರ್ವಜನಾದರಣೀಯೆಯಾದ ಆ ಮಾತೆಯು ತನ್ನ ಏಕಮಾತ್ರಪುತ್ರನಿಗೆ ಪಾರಸೀಕಸಂಪ್ರದಾಯಾನುಸಾರವಾಗಿ ಶಿಕ್ಷಣವನ್ನುಕೊಡಿಸಿ ಅಭಿವೃದ್ಧಿಗೆ ತಂದಳು. ಹಿಂದೆ ನೆಪೋಲಿಯನ್, ತೋದರ್‌ಮಲ್ ಮುಂತಾದವರು ತಾಯಿಯ ಮಾತನ್ನು ಸ್ವಲ್ಪವೂ ಮೀರದೆ ಹೇಗೆ ಮಾತೃವಾಕ್ಯಪರಿಪಾಲಕರಾಗಿದ್ದರೋ, ಹಾಗೆಯೇ ನೌರೋಜಿಯವರೂ ತಮ್ಮ ಮಾತೆಯ



ಮಾತನ್ನು ಸ್ವಲ್ಪವೂ ಉಲ್ಲಂಘಿಸದೆ ಅವರ ಹಿತಸೂಚನೆಯಂತೆಯೇ ನಡೆಯುತ್ತಿದ್ದರು.

ಇವರು ಬೊಂಬಾಯಿಯ "ಎಲ್ಫಿನ್‌ಸ್ಟನ್" ಪಾಠಶಾಲೆಯಲ್ಲಿಯೂ, ಇತರ ಕಲಾಶಾಲೆಗಳಲ್ಲಿಯೂ ಅಭ್ಯಾಸಿಸಿ ಅಲ್ಲಿನ ಎಲ್ಲ ಪರೀಕ್ಷೆಗಳಲ್ಲಿಯೂ ಉತ್ತಮತರರಾಗಿ ಉತ್ತೀರ್ಣರಾದರು. ಇದರಿಂದ ಇವರಿಗೆ ನಾನಾ ಬಹುಮಾನಗಳೂ ದೊರೆದುವು. ಬೊಂಬಾಯಿ ವಿದ್ಯಾಭ್ಯಾಸದ ಶಾಖಾಧ್ಯಕ್ಷರೂ, ಮುಖ್ಯನ್ಯಾಯಾಧಿಪತಿಗಳೂ ಆಗಿದ್ದ ಸರ್, ಎರ್‌ಸ್ಕ್ಯನ್‌ಪೆರ್ರಿಯವರು ದಾದಾಭಾಯಿಯವರ ಕುಶಾಗ್ರಬುದ್ಧಿಗೂ ಅಸಾಧಾರಣಶಕ್ತಿಗೂ ಮೆಚ್ಚಿ, "ಇಂಗ್ಲೆಂಡಿಗೆ ಹೋಗಿ 'ಲಾ (ನ್ಯಾಯಶಾಸ್ತ್ರ)' ವನ್ನು ಓದುವುದಾಗಿದ್ದರೆ ಪ್ರಯಾಣಕ್ಕೂ, ಭೋಜನಾದ್ಯುಪಚಾರಗಳಿಗೂ ಮುಟ್ಟುವ ಒಟ್ಟು ವ್ಯಯದಲ್ಲಿ ಅರ್ಧವನ್ನು ಕೊಡುವೆನು," ಎಂದು ಹೇಳಿ ಪ್ರೋತ್ಸಾಹಿಸಿದರು. ಆದರೆ ಗುರುವಂಶ ಸಮುತ್ಪನ್ನರಾದ ದಾದಾಭಾಯಿಯವರನ್ನು ಸಮುದ್ರಯಾನದ ಮೂಲಕದಿಂದ ವಿದೇಶಗಳಿಗೆ ಕಳುಹಿಸಲು ಸಜಾತಿಯವರು ಹೇಗೆ ಒಪ್ಪುವರು? ಹಿಂದಣಕಾಲದಲ್ಲಿ ಹಿಂದುಗಳಲ್ಲಿದ್ದಂತೆಯೇ ಪಾರಸೀಕರಲ್ಲಿಯೂ ಮತಸಂಪ್ರದಾಯ ಮತಾಭಿಮಾನಗಳು ಚೆನ್ನಾಗಿ ಬೇರೂರಿದ್ದುವು. ಈ ಮತಾಭಿಮಾನಾದಿಗಳು ತಮ್ಮ ವಿದ್ಯಾಭ್ಯಾಸಕ್ಕೆ ಕುಂದನ್ನುಂಟು

Digitized by ROJA MUTHIAH RESEARCH LIBRARY

ಮಾಡುವುದೆಂದು ತಿಳಿದಿದ್ದರೂ ನೌರೋಜಿಯವರು ಮತಬಾಂಧವರ ಅಭಿಪ್ರಾಯಗಳನ್ನು ಇದಿರಿಸುವಷ್ಟು ಕಠಿಣರಾಗಿರಲಿಲ್ಲ.

ತಾವು ಕೈಗೊಳ್ಳುವ ಕಾರ್ಯವೆಲ್ಲವೂ ಪರೋಪಕಾರದಲ್ಲಿಯೇ ವಿನಿಯೋಗಿಸಲ್ಪಡಬೇಕೆನ್ನುವ ಸತ್ಸಂಕಲ್ಪವುಳ್ಳ ದಾದಾಭಾಯಿಯವರು, ಸೆಕ್ರೆಟೇರಿಯಟ್‌ನಲ್ಲಿ ಅನುಕೂಲವಾದ ಕೆಲಸವನ್ನು ಸ್ವೀಕರಿಸುವಂತೆ ಬಲಾತ್ಕರಿಸಲ್ಪಟ್ಟರೂ, ಅದನ್ನೊಪ್ಪದೆ 1850ರಲ್ಲಿ ತಾವು ಅಭ್ಯಾಸಿಸಿದ ಕಲಾಶಾಲೆಯಲ್ಲಿಯೇ ಗಣಿತಶಾಸ್ತ್ರದ ಸಹಾಯೋಪಾಧ್ಯಾಯರಾಗಿ ಸೇರಿದರು. ತಮ್ಮ ಬುದ್ಧಿಕೌಶಲ್ಯದಿಂದಲೂ, ಕಾರ್ಯದಕ್ಷತೆಯಿಂದಲೂ, ಸರ್ವರ ಮೆಚ್ಚುಗೆಗೆ ಪಾತ್ರರಾಗಿ ನಾಲ್ಕುವರ್ಷಗಳೊಳಗಾಗಿ ಅದೇ ಕಲಾಶಾಲೆಯ ಮುಖ್ಯೋಪಾಧ್ಯಾಯರಾಗಿ ನಿಯಮಿಸಲ್ಪಟ್ಟರು.

ಹೀಗೆ ಜನಾಂಗದ ಪುರೋಭಿವೃದ್ಧಿಯನ್ನು ಬಯಸಿ ಮುಖ್ಯೋಪಾಧ್ಯಾಯವೃತ್ತಿಯಲ್ಲಿ ವರ್ತಿಸುತ್ತಿದ್ದರೂ ಇವರ ಮನಸ್ಸು ವಿದೇಶೀಯರ ಜ್ಞಾನವನ್ನೆಲ್ಲಾ ಸ್ವದೇಶದಲ್ಲಿ ತುಂಬಿಡಬೇಕೆನ್ನುವ ಮಹತ್ವಾಕಾಂಕ್ಷೆಯಿಂದ ಇಂಗ್ಲೆಂಡಿಗೆ ಹೋಗಿಯೇ ತೀರಬೇಕೆಂದು ಕುತೂಹಲಪಡುತಿದ್ದಿತು. ಆಗಿನ ಈ ದೇಶಸ್ಥಿತಿಯು ದಾದಾಭಾಯಿಯವರ ಉದ್ದೇಶವನ್ನು ಮತ್ತಷ್ಟು ಹೆಚ್ಚಿಸುವ ಸ್ಥಿತಿಯಲ್ಲಿಯೂ ಇದ್ದಿತು. ಕಡೆಗೆ ಸಹಜವಾದ ಸ್ವದೇಶಾಭಿಮಾನವೂ, ಧೈರ್ಯವೂ, ಅಸದೃಶವಾದ ಮೇಧಾಶಕ್ತಿಯೂ ನೌರೋಜಿ



ಯವರಲ್ಲಿ ಇಂಗ್ಲೆಂಡಿಗೆ ಹೋಗಿಯೇ ತೀರಬೇಕೆನ್ನುವ ಆಶೆಯನ್ನು ಪ್ರೇರಿಸಿದುದು ಆಶ್ಚರ್ಯವಲ್ಲ. ಇದಕ್ಕೆ ಅನುಕೂಲವಾಗಿ "ಮೆಸರ್ಸ್ ಕಾಮ ಅಂಡ್ ಕಂಪೆನಿ" ಎನ್ನುವ ಪಾರಸೀಕಸಂಘಕ್ಕೆ, ಪರದೇಶದ ವ್ಯಾಪಾರಕಾರ್ಯಗಳನ್ನು ವಿಚಾರಮಾಡಿ ಆಯವ್ಯಯಗಳನ್ನು ಸರಿಯಾಗಿಟ್ಟು ಸಂಘದ ಏಳ್ಗೆಯನ್ನು ಬಯಸುವ ಒಬ್ಬ ಶಕ್ತನಾದ ಅಧಿಕಾರಿಯ ಆವಶ್ಯಕತೆಯೂ ಒದಗಿದ್ದಿತು. ದಾದಾಭಾಯಿಯವರು ಸಂಘದ ಸದುದ್ದೇಶಸಾಧನೆಗೂ, ಸ್ವೇಷ್ಟಾರ್ಥಸಿದ್ಧಿಗೂ ತಕ್ಕಂತೆ ಈ ಕೆಲಸವನ್ನು ಕೈಗೊಂಡು ಇಂಗ್ಲೆಂಡಿಗೆ ಪಯಣಗೊಂಡರು.

## ಇಂಗ್ಲೆಂಡಿನಲ್ಲಿ ಮಾಡಿದ ಕೆಲಸಗಳು

ದಾದಾಭಾಯಿಯವರು ಪಾರಸೀಕ ಸಂಘದ ಅಧ್ಯಕ್ಷರಾಗಿ ವಿದೇಶಕ್ಕೆ ಪ್ರಯಾಣಮಾಡಿದ ಬಳಿಕ "ವಿದ್ಯಾರ್ಥಿಗಳ ಸಾಹಿತ್ಯ ಮತ್ತು ವಿಜ್ಞಾನಸಂಘ" ವೊಂದನ್ನು ಸ್ಥಾಪಿಸಿ 'ವಿದ್ಯಾರ್ಥಿಗಳ ಸಾಹಿತ್ಯ ವಿಚಾರಗಳು' ಎನ್ನುವ ಮಾಸಪತ್ರಿಕೆ ಯೊಂದನ್ನು ಪ್ರಕಟಿಸಲಾರಂಭಿಸಿದರು. ಈ ಪತ್ರಿಕೆಯಲ್ಲಿ ಸರಿಯಾದ ವಿದ್ಯಾಭ್ಯಾಸ, ರಾಜತಂತ್ರ, ಕರ್ತವ್ಯಾಕರ್ತವ್ಯಜ್ಞಾನ, ಇವೇ ಮೊದಲಾದ ವಿಷಯಗಳನ್ನು ಹೃದಯಂಗಮವಾಗಿ ಬರೆದು ಪ್ರಕಟಿಸುತ್ತ ಬಂದರು. ಇದರಿಂದ ಸಂಘವೂ, ಪತ್ರಿಕೆಯೂ ದಿನದಿನಕ್ಕೆ

Digitized by ROJA MUTHIAH RESEARCH LIBRARY

ವೃದ್ಧಿಯಾಗುತ್ತ ಬರಲು, ಇದಕ್ಕೆ ಅನುಕೂಲಿಸುವಂತೆ "ದಯಾಪ್ರಸಾರಕಮಂಡಲಿ" ಎನ್ನುವ ಒಂದು ಉಪಸಂಘವನ್ನೂ ಆರಂಭಿಸಿ ಅದರ ಶಾಖೋಪಶಾಖೆಗಳ ಮೂಲಕವಾಗಿ ಗುಜರಾತಿಯಲ್ಲಿಯೂ ಮರಾಟಿಯಲ್ಲಿಯೂ, ಜನರ ಜ್ಞಾನವಿಕಾಸಕ್ಕೆ ತಕ್ಕ ಚರ್ಚೆಗಳನ್ನು ನಡೆಯಿಸುವಂತೆ ಏರ್ಪಡಿಸಿ ಬಹು ಪ್ರಸಿದ್ಧಿಗೆ ಬಂದರು.

ಇವರು ವ್ಯಾಪಾರವೃದ್ಧಿಗಾಗಿ ಇಂಗ್ಲೆಂಡಿಗೆ ಹೋಗಿದ್ದರೂ ಇವರ ಅಂತರಂಗದಲ್ಲಿ ಯಾವಾಗಲೂ ಭಾರತೀಯರ ಹಿತವು ಹೇಗಾಗಬಹುದೆನ್ನುವುದೇ ತುಂಬಿ ತುಳುಕಾಡುತ್ತಿದ್ದಿತು. ಇವರು ಡಬ್ಲಿಯು. ಸಿ. ಬಾನರ್ಜಿ ಎನ್ನುವವರ ಸಾಹಾಯ್ಯದಿಂದ ಲಂಡರ್ನ ನಗರದಲ್ಲಿ "ಭಾರತೀಯರ ಸಂಘ" ವೊಂದನ್ನು ಸ್ಥಾಪಿಸಿದರು. ಅದು ಈಗಲೂ ಚಿರಜೀವಿತದಿಂದ ಭರತಖಂಡಕ್ಕೆ ನಾನಾಮುಖವಾಗಿ ಉಪಕರಿಸುತ್ತಿರುವುದು. ಅಲ್ಲದೆ ಉದಾರ ದೃಷ್ಟಿಯುಳ್ಳದಾಗಿಯೂ, ದೊಡ್ಡ ದೊಡ್ಡ ಕಾರ್ಯಭಾಗಗಳನ್ನೊಳಗೊಳ್ಳುವುದಾಗಿಯೂ, ಇರುವ "ಈಸ್ಟ್ಇಂಡಿಯಾ" ಎನ್ನುವ ಮತ್ತೊಂದು ದೊಡ್ಡ ಸಂಘವನ್ನು ಸ್ಥಾಪಿಸಿದರು. ಈ ಸಂಘಕ್ಕೆ ಭಾರತೀಯರ ಹಿತೈಷಿಗಳಾದ ಐರೋಪ್ಯರೂ ಸಭಿಕರಾದರು. ಇದರಿಂದ ಐರೋಪ್ಯರಿಗೂ ಭಾರತೀಯರಿಗೂ ದಿನದಿನಕ್ಕೆ ಸಾಮರಸ್ಯವುಂಟಾಗಲವಕಾಶವೊದಗಿತು. ಸಂಘದ

Digitized by ROJA MUTHIAH RESEARCH LIBRARY



ಚಿರಸ್ಥಾಯಿತೆಯನ್ನುದ್ದೇಶಿಸಿ ಭರತಖಂಡದ ಅನೇಕ ಮಹಾರಾಜರುಗಳಿಂದ ದ್ರವ್ಯವನ್ನು ಶೇಖರಿಸಿ ದೊಡ್ಡ ಮೂಲಧನವನ್ನು ನೆಲೆಗೊಳಿಸಿದರು. ಈ ಸಂಘದ ಪುರೋಭಿವೃದ್ಧಿಗಾಗಿ ತಮ್ಮ ಜನ್ಮವನ್ನೇ ಧಾರೆಯೆರೆದರೆಂದು ಹೇಳಿದರೂ ಸ್ವಲ್ಪವೇ ಆಗುವುದು.

ಇವರು ಸೀಮೆಯಲ್ಲಿದ್ದ ಕಾಲದಲ್ಲಿ ಭಾರತೀಯರ ಕಷ್ಟನಷ್ಟಗಳ ವಿಷಯಗಳನ್ನುದ್ದೇಶಿಸಿ ಉಪನ್ಯಾಸಗಳ ಮೂಲಕವೂ ಆಂಗ್ಲಜನರ ಹೃದಯಂಗಮವಾಗುವಂತೆ ಪ್ರಕಟಿಸುತ್ತ ಬಂದರು. ಇದರಿಂದ ಐರೋಪ್ಯರ ಸೌಹಾರ್ದವು ಭರತಖಂಡದ ಪುರೋಭಿವೃದ್ಧಿಗೆ ಸಂಪೂರ್ಣ ಸಾಹಾಯ್ಯವನ್ನುಂಟುಮಾಡಲು ಸಾಧಕವಾಯಿತು. ಇವರು ಪಾರ್ನೆಲ್, ಡಿಸ್ರೇಲಿ, ಬರ್ಕ್, ಗೋಖಲೆ, ರಾಜಾರಾಮಮೋಹನರಾಯ್ ಮೊದಲಾದ ಮಹಾಪುರುಷರಂತೆ ದೀರ್ಘಾಲೋಚನೆಯಿಂದ ತಾವು ನ್ಯಾಯವೆಂದು ನಿರ್ಧರಿಸಿದ ಅಭಿಪ್ರಾಯಗಳನ್ನು ಎಂದಿಗೂ ಮಾರ್ಪಡಿಸುತ್ತಿರಲಿಲ್ಲ. ಅದರಲ್ಲಿಯೂ, ರಾಜಕೀಯವಿಚಾರಗಳಲ್ಲಿ ಇವರ ವಿಚಾರಗಳು ವ್ಯತ್ಯಸ್ತಗಳಾಗದೆ ದಾರ್ಢ್ಯವನ್ನೇ ಪಡೆಯುತ್ತಿದ್ದುವು. ಇವರ ಕಾರ್ಯಗಳೆಲ್ಲವೂ ಭಾರತೀಯರ ಕಷ್ಟನಷ್ಟಗಳನ್ನು ಹೋಗಲಾಡಿಸಿ ಅವರ ಪುರೋವೃದ್ಧಿಯನ್ನು ಬಯಸತಕ್ಕವುಗಳಾಗಿದ್ದರೂ, ಸಾಮ್ರಾಜ್ಯಪ್ರಭುತ್ವದವರಲ್ಲಿಯೂ, ಸಾರ್ವಭೌಮರಲ್ಲಿಯೂ ಇವರಿಗಿದ್ದ ಅನ್ಯಾದೃಶವಾದ ರಾಜಭಕ್ತಿಯು ಸರ್ವಜನಮಾನ್ಯ

ವಾಗಿದ್ದಿತು. “ಆಂಗ್ಲರಾಷ್ಟ್ರಕ್ಕೆ ಐರ್ಲೆಂಡ್ ಹೇಗೆ ಪ್ರತ್ಯೇಕವಲ್ಲವೋ ಹಾಗೆಯೇ ಭರತಖಂಡವೂ ಬೇರೆಯಲ್ಲ” ವೆನ್ನುವದನ್ನು ಐರೋಪ್ಯದಲ್ಲಿ ಸ್ಥಿರಪಡಿಸಿದ ಕೀರ್ತಿಗೆ ನಮ್ಮ ದಾದಾಭಾಯಿಯವರೇ ಪಾತ್ರರೆಂದು ಭಾರತೀಯರೆಲ್ಲರೂ ತಿಳಿಯಬಹುದಾಗಿದೆ.

ಹೀಗೆ ಕೆಲವು ಕಾಲವು ಕಳೆದುಹೋಯಿತು. ಕಾಲವು ನಮ್ಮ ಆಲಸ್ಯವನ್ನೂ ಲೆಕ್ಕಿಸುವುದಿಲ್ಲ. ಜಾಗರೂಕತೆಯನ್ನೂ ಲೆಕ್ಕಿಸುವುದಿಲ್ಲ. ತನ್ನ ಕರ್ತವ್ಯವನ್ನು ಅದು ಎಂದಿಗೂ ಬಿಡುವುದಿಲ್ಲ. ಒಬ್ಬನ ಜೀವಮಾನವೆಲ್ಲಾ ಒಂದೇ ಕೆಲಸದಲ್ಲಿಯೇ ವಿನಿಯೋಗಿಸಲು ಸಾಧ್ಯವೂ ಅಲ್ಲ. ಕಾರಣಾಂತರಗಳಿಂದ ನೌರೋಜಿಯವರು ಪಾರಸೀಕರ ವಣಿಕ್ಸಂಘಾಧ್ಯಕ್ಷತೆಯನ್ನು ದೂರೀಕರಿಸಿ ತಾವೇ ವ್ಯಾಪಾರವನ್ನು ಕೈಗೊಂಡು ಸ್ವಾರ್ಜಿತಧನಾಧಿಕ್ಯದಿಂದ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಸಭಿಕರಾಗ ಪ್ರಯತ್ನಿಸಿದರು. ಆದರೆ ಇದು ಸ್ವಾರ್ಥತೆಯ ಪರಕಾಷ್ಠೆಯಲ್ಲ. ಪಾರ್ಲಿಮೆಂಟಿನಲ್ಲಿ ಸಭ್ಯರಾಗಲು ಧನಿಕರೇ ಪ್ರಧಾನರಾಗಿದ್ದರು. ತಾವು ಧನಿಕರೆನಿಸಿದ ಹೊರತು ಅಲ್ಲಿ ಸಭ್ಯತ್ವವು ದೊರೆಯುವಂತಿರಲಿಲ್ಲ. ಅಲ್ಲಿ ಸಭಿಕರಾದ ಹೊರತು ಭಾರತೀಯರ ಇಷ್ಟಾರ್ಥಸಿದ್ಧಿಗೆ ಪ್ರಯತ್ನಿಸಲು ದುಸ್ಸಾಧ್ಯವಾಗಿದ್ದಿತು. ಇದಕ್ಕಾಗಿ ಜನರಲ್ಲಿ ತಕ್ಕ ವ್ಯವಹಾರವನ್ನೆಲ್ಲಾ ಸರಿಪಡಿಸಿಕೊಂಡರು.



## ರಾಜಕೀಯ ವಿಚಾರಗಳು

ದಾದಾಭಾಯಿಯವರು ಐರೋಪ್ಯದೇಶಗಳಲ್ಲಿ ಸಂಚರಿಸಿ ಅಲ್ಲಿನ ರಾಜ್ಯಸ್ಥಿತಿಯನ್ನೂ ಜನರಲ್ಲಿರುವ ಸ್ವಾತಂತ್ರ್ಯಜ್ಞಾನವನ್ನೂ ಚೆನ್ನಾಗಿ ಅರಿತು ಅದು ಭಾರತೀಯರಲ್ಲಿಯೂ ನೆಲೆಗೊಳ್ಳಬೇಕೆಂದುದ್ದೇಶಿಸಿದರು. ಇವರಲ್ಲಿದ್ದ ಅರ್ಥಶಾಸ್ತ್ರ ಪರಿಶೀಲನ ಜ್ಞಾನಾಧಿಕ್ಯವನ್ನು ಬೊಂಬಾಯಿ ಪ್ರಭುತ್ವದವರು ಪರೀಕ್ಷಿಸಿ ಅನೇಕ ಮುಖ್ಯಸಂದರ್ಭಗಳಲ್ಲಿ ಇವರ ಸೂಚನೆಯನ್ನು ಬಹುವಾಗಿ ಗೌರವಿಸುತಿದ್ದರು. ಅಲ್ಲದೆ “ಪಾಸೆಟ್ ಕಮಿಟಿ” ಯೆನ್ನುವ ಭರತಖಂಡದ ಆರ್ಥಿಕಸಂಘದವರೂ ನೌರೋಜಿಯವರ ಅರ್ಥಶಾಸ್ತ್ರದ ಜ್ಞಾನಾಧಿಕ್ಯವನ್ನೂ ತಿಳಿದು ಅವರ ಅಭಿಪ್ರಾಯಗಳಿಗೂ ಸೂಚನೆಗಳಿಗೂ ಕೃತಜ್ಞರಾಗಿ ಅದರಂತೆಯೇ ತಮ್ಮ ನಿರ್ಣಯಗಳನ್ನು ಗೊತ್ತುಮಾಡುತಿದ್ದರು. ಭರತಖಂಡದ ದಾರಿದ್ರ್ಯ ತೆರುಗೆಯ ಆಧಿಕ್ಯ, ನಾಲೆಗಳ ಅಭಾವ, ಇವೇ ಮೊದಲಾದ ಪ್ರಜಾಸೌಖ್ಯ ವಿಚಾರಗಳಲ್ಲಿ ಪ್ರಭುತ್ವದವರು ಹೆಚ್ಚು ಹೆಚ್ಚಾಗಿ ಶ್ರದ್ಧೆಯನ್ನು ವಹಿಸಲೇಬೇಕೆಂದೂ, ಪ್ರಭುತ್ವದವರಲ್ಲಿ ಹಲವು ಬಗೆಯ ಲೋಪಗಳು ಪರಿಹಾರವಾಗಬೇಕಾದುದು ಅಗತ್ಯವೆಂದೂ ಬಗೆಮುಟ್ಟುವ ಉಪನ್ಯಾಸಗಳನ್ನೂ ಪ್ರಕಟಿಸಿ ಜನರೂ ಪ್ರಭುತ್ವದವರೂ ಜಾಗರೂಕತೆಯನ್ನವಲಂಬಿಸುವಂತೆ ಪ್ರಯತ್ನಿಸುತ್ತಿದ್ದರು. ಪ್ರಭುತ್ವದವರಲ್ಲಿ ಆಗುವ ದುಂದಾದ ವ್ಯಯವನ್ನೂ,

Digitized by ROJA MUTHIAH RESEARCH LIBRARY

ಈ ದೇಶದಿಂದ ನಾನಾಮುಖವಾಗಿ ವಿದೇಶಕ್ಕೆ ಹೋಗುವ ಅಪಾರವಾದ ದ್ರವ್ಯವನ್ನೂ, ವ್ಯಕ್ತಗೊಳಿಸಿ ಇದರಿಂದ ಭಾರತೀಯರಿಗೆ ಉಂಟಾಗುವ ನಾನಾವಿಧವಾದ ಕಷ್ಟ, ನಷ್ಟ, ಅನ್ಯಾಯಾದಿಗಳನ್ನು ತೊಲಗಿಸಲು ಬಹು ಪ್ರಯತ್ನಿಸಿದರು. ದೇಶಹಿತಕಾರ್ಯಗಳಲ್ಲಿ ಇವರು ವಾದಿಸುವ ವಾಗ್ವೈಖರಿಗೆ ಪ್ರಪಂಚವೇ ಆಶ್ಚರ್ಯಗೊಳ್ಳುವಂತಿದ್ದಿತು.

ದಿವಾನ್‌ಗಿರಿ

ಹಿಂದೆ ಒಂದು ಸಮಯದಲ್ಲಿ ಬರೋಡಾ ಸಂಸ್ಥಾನವು ಅವ್ಯವಸ್ಥೆಯ ಸ್ಥಿತಿಯಲ್ಲಿದ್ದಿತು. ರಾಜ್ಯದ ಆಡಳಿತೆಗಳು ಕ್ರಮವಾಗಿ ನಡೆಯದೆ ದೇಶವು ಅಶಾಂತಸ್ಥಿತಿಯನ್ನು ಪಡೆದಿದ್ದುದರಿಂದ ಮಹಾರಾಜರಾದ ಗಾಯಕವಾಡರವರು ನೌರೋಜಿಯವರಿಂದಲೇ ರಾಜ್ಯವು ಕ್ರಮಪಡಬೇಕೆಂದು ಉದ್ದೇಶಿಸಿ 1874 ರಲ್ಲಿ ಸಂಸ್ಥಾನದ ಮಂತ್ರಿತ್ವವನ್ನು ಅವರಿಗೆ ವಹಿಸಿದರು. ನೌರೋಜಿಯವರು ಈ ಉತ್ತರವಾದಿತ್ವವುಳ್ಳ ಮಹಾ ಪದವಿಯನ್ನು ಸ್ವೀಕರಿಸಿ ತಮ್ಮ ಸ್ವಭಾವಸಿದ್ಧವಾದ ಕರ್ತವ್ಯ ಜಾಗರೂಕತೆಯಿಂದ ಆವಶ್ಯಕವಾದ ಮಾರ್ಪಾಡುಗಳನ್ನು ಮಾಡಿ ಬೊಂಬಾಯಿ ಪ್ರಾಂತ್ಯದಿಂದ ಸಮರ್ಥರನ್ನು ಬರಮಾಡಿಕೊಂಡು ಅವರಿಗೆ ತಕ್ಕತಕ್ಕ ಉದ್ಯೋಗಗಳನ್ನಿತ್ತು, ಸ್ವಲ್ಪಕಾಲದೊಳಗಾಗಿಯೇ ಬಲು ಚೆನ್ನಾಗಿ ಮಾರ್ಪುಗೊಳಿಸಿದರು. ಆಗ ದೇಶದ ಅಶಾಂತತೆಯು

Digitized by ROJA MUTHIAH RESEARCH LIBRARY



ಶಾಂತಿಗೊಂಡಿತು "ಸಿವಿಲ್, ಕ್ರಿಮಿನಲ್" ನ್ಯಾಯಸ್ಥಾನಗಳು ಬಹು ಕ್ರಮಕ್ಕೆ ಬಂದುವು. ದೇಶಕ್ಕೆ ಹಿತಕರವಾದ ಕೆಲಸಗಳೆಲ್ಲವೂ ಶ್ರದ್ಧೆಯಿಂದ ಅನುಕೂಲಗೊಳಿಸಲ್ಪಟ್ಟಿತು. ಹೀಗೆ 2ವರ್ಷದೊಳಗಾಗಿ ಇಂತಹ ಸುಸ್ಥಿತಿಯನ್ನುಂಟುಮಾಡಿ ಅಲ್ಲಿಂದ ಕೂಡಲೇ ಸ್ವಸ್ಥಳವಾದ ಬೊಂಬಾಯಿಗೆ ಬಂದು ಅಲ್ಲಿ ಮ್ಯುನಿಸಿಪಲ್, ಮೆಂಬರಾಗಿ ಪ್ರಾಂತಿಕಸಭಿಕರಿಂದ ಆರಿಸಲ್ಪಟ್ಟರು. ಅಲ್ಲಿ ಪ್ರಭುತ್ವದವರಿಗೂ ಪ್ರಜೆಗಳಿಗೂ ಸರ್ವವಿಷಯದಲ್ಲಿಯೂ ಸುಖಕರವಾಗಿರುವಂತೆ ವರ್ತಿಸಿ ಬಹುಕೀರ್ತಿವಡೆದುದರಿಂದ ನಿಯಮನಿರ್ಮಾಣಸಭಾಸದರಾಗಲು ಅವಕಾಶವುಂಟಾಯಿತು. ಇವರು ಎಲ್ಲಿ ಸಭಿಕರಾಗಿದ್ದರೂ ನ್ಯಾಯೈಕಪಕ್ಷಪಾತಿಗಳಾಗಿ, ತಮಗೆ ನ್ಯಾಯವೆಂದು ತೋರಿದುದನ್ನು ಧೈರ್ಯದಿಂದ ವಾದಿಸಿ ಸಾಧಿಸುವ ಸಾಹಸವನ್ನೂ, ಧೈರ್ಯವನ್ನೂ ಪಡೆದಿದ್ದರು.

ಪುನಃ ವಿದೇಶ ಗಮನ

ಹೀಗೆ ಕೆಲವು ಕಾಲವು ಗತಿಸಿದನಂತರದಲ್ಲಿ ಮರಳಿ ಇಂಗ್ಲೆಂಡಿಗೆ ಪ್ರಯಾಣಸನ್ನದ್ಧರಾಗಿ 1886 ರಲ್ಲಿ ಹೊರಟರು. ಅಲ್ಲಿ ಆರ್ಥಿಕವಿಚಾರಗಳಲ್ಲಿ ಅತ್ಯುತ್ಸಾಹದಿಂದ ಕೆಲಸಮಾಡಿ ಅಲ್ಲಿರುವ ಇಂಡಿಯಾಪ್ರಭುತ್ವ (Home Government) ದವರಿಗೆ ಭಾರತೀಯರ ಅನಾನುಕೂಲ್ಯಗಳ ನಿಜತ್ವವನ್ನೂ ಪ್ರಭುತ್ವದವರಿಗೆ ನಂಬುಗೆಯುಂಟಾಗುವಂತೆ ವಿಷಯಗಳನ್ನು

ವಿಶದೀಕರಿಸಿ ತಕ್ಕ ಸೂಚನೆಗಳನ್ನೂ ಕೊಡುತ್ತ ಆಂಗ್ಲೇಯರಿಗೆ
ಭಾರತೀಯರಲ್ಲಿ ಮರುಕಹುಟ್ಟುವಂತೆ ಮಾಡಿದರು.

ಅನಂತರದಲ್ಲಿ ಇಂಗ್ಲೆಂಡಿನ ಸಾಮ್ರಾಜ್ಯಸಭೆಯ ಸಭಿ
ಕರಾಗಲು ಉದಾರಹೃದಯರ ಪ್ರೀತಿಗೆ ಪಾತ್ರರಾಗಿ ಐದು
ವರ್ಷಕಾಲದ ವರೆಗೆ ಎಡೆಬಿಡದೆ ಪ್ರಯತ್ನಿಸಿದರೂ ಕೃತಾರ್ಥ
ರಾಗಲಿಲ್ಲ. ಇದಕ್ಕೆ ಬೇರೊಂದು ಕಾರಣವಿದ್ದಿತು. ಐರ್ಲೆಂ
ಡಿಗೆ ಸ್ವಾರಾಜ್ಯವನ್ನು ಕೊಡುವ ವಿಚಾರದಲ್ಲಿ ನೌರೋಜಿಯ
ವರು ಭಿನ್ನಾಭಿಪ್ರಾಯವನ್ನು ಪ್ರದರ್ಶಿಸಿದ್ದರು. ಅಲ್ಲದೆ ಈ ಅಭಿ
ಪ್ರಾಯಕ್ಕೆ ತಕ್ಕಂತೆ ಇದ್ದ ಗ್ಲಾಡ್‌ಸ್ಟರ್ ಮಹಾಶಯರ ಅನು
ಯಾಯಿಗಳೂ ಆಗಿದ್ದರು. ಇದರಿಂದ ಇವರ ಕಡೆಗೆ ಹೆಚ್ಚು
ಮತಗಳು (Votes) ದೊರೆಯದೆ ಭಗ್ನಮನೋರಥರಾದರು.
ಒಟ್ಟಿನಲ್ಲಿ ಇವರು ಭಾರತೀಯರಾಗಿದ್ದುದರಿಂದಲೇ ಇವರಿಗೆ
ಆಂಗ್ಲೇಯರಿಂದ ಹೆಚ್ಚು ಮತಗಳು ದೊರೆಯಲಿಲ್ಲವೆನ್ನುವುದು
ಸಹಜವಾಗಿದೆ. ಆದರೂ ಈ ವಿಷಯದಲ್ಲಿ ಪ್ರತಿಬಂಧಕಗಳು
ಒದಗಿದರೂ ಅದನ್ನು ಲೆಕ್ಕಿಸದೆ ಹಗಲಿರುಳೂ ಭಾರತೀಯರ
ಶ್ರೇಯಸ್ಸಿಗಾಗಿ ಪ್ರಯತ್ನಿಸಲು ವಿಮುಖರಾದವರೇ ಅಲ್ಲ. ಕಲ್ಕತ್ತೆ
ಯಲ್ಲಿ ನಡೆದ ೨ ನೆಯದಾದ ರಾಷ್ಟ್ರೀಯ ಮಹಾಸಭೆ (The
Indian National Congress) ಗೆ ಅಧ್ಯಕ್ಷರಾಗಲು
ಆಹ್ವಾನಗೊಂಡು, ಅಲ್ಲಿ ತಮ್ಮ ವಕ್ತೃತ್ವದಿಂದಲೂ, ಪ್ರತಿಭಾಶಕ್ತಿ



ಯಿಂದಲೂ, ಅನುಭವಸಿದ್ಧವಾದ ಸೂಚನೆಗಳಿಂದಲೂ, ಜನ
ರೆಲ್ಲರೂ ದೇಶಸೇವಾತತ್ಪರರಾಗುವಂತೆ ಬೋಧಿಸಿ ಯಶಸ್ವಿಗ
ಳಾದರು.

## ಮತ್ತೆ ಸೀಮೆಗೆ ತೆರಳಿದುದು

ನೌರೋಜಿಯವರು ಸಂಕಲ್ಪಿಸಿದ ಕಾರ್ಯದಲ್ಲಿ ವಿಘ್ನಗಳೊ
ದಗಿದರೂ ಪುನ ಪುನಃ ಪ್ರಯತ್ನಿಸಿ ಸಿದ್ಧಿಯನ್ನು ಪಡೆಯತಕ್ಕ
ಸ್ಥಿರಸಂಕಲ್ಪರಾದುದರಿಂದ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಸಭಿಕ
ರಾಗಲು ಪುನಃ ಯತ್ನಿಸಬೇಕೆಂದು ಮರಳಿ ವಿದೇಶಕ್ಕೆ ಪ್ರಯಾಣ
ಮಾಡಿದರು. ಅಲ್ಲಿ ಮರಳಿ ಐದು ವರ್ಷಗಳ ವರೆಗೂ ಪ್ರಯತ್ನಿಸಿ
ದರು. ಆಗ ಎಂದರೆ 1892 ರಲ್ಲಿ ಇಷ್ಟಸಿದ್ಧಿಯು ಈಡೇರಿ
" ಫಿರ್ಸ್ಬರಿ ಡಿಸ್ಟ್ರಿಕ್ಟ್ " ನ ಪ್ರತಿನಿಧಿಗಳಿಂದ ಅವರು ಪ್ರತಿನಿಧಿ
ಯಾಗಿ ಆರಿಸಲ್ಪಟ್ಟು ಪಾರ್ಲಿಮೆಂಟಿನ ಸಭಿಕರಾದರು. ಈ ಬಗೆ
ಯಾಗಿ ಇಷ್ಟಾರ್ಥಸಿದ್ಧಿಯೊದಗಿ ಅಭೂತ ಪೂರ್ವವಾದ ಸನ್ಮಾನ
ವನ್ನು ಪಡೆದರು. ಇದರಿಂದ ಭಾರತೀಯ ಜನಾಂಗಕ್ಕೇ ಅಸದೃ
ಶವಾದ ಸಂತೋಷವುಂಟಾಯಿತು. ಇದರಿಂದ ಮುಂದೆ ಭಾರತೀ
ಯರಿಗೂ ಪಾರ್ಲಿಮೆಂಟಿನ ಸಭಿಕರಾಗುವ ಗೌರವವು ಸ್ಥಿರಗೊಳಿ
ಸಿದಂತಾಯಿತು. ಅನ್ಯರಾಷ್ಟ್ರದಲ್ಲಿ ಅನ್ಯದೇಶೀಯರ ಮನ್ನಣೆಗೆ
ಪಾತ್ರರಾಗಿ ಅವರಲ್ಲಿ ನಂಬುಗೆಯನ್ನು ಸ್ಥಿರಪಡಿಸಿ ಅವರ ಪರವಾ
ಗಿಯೇ ಪ್ರತಿನಿಧಿತ್ವವನ್ನು ಪಡೆಯುವುದು ನಾಡಾಡಿಯ ಸಾಮಾ

Digitized by ROJA MUTHIAH RESEARCH LIBRARY
V,2wM25 N

ನ್ಯರಿಂದ ಸಾಧ್ಯವೆ? ಅದರಲ್ಲಿಯೂ ಪ್ರಥಮ ಪ್ರಯತ್ನದಲ್ಲಿ ಬರ ತಕ್ಕ ವಿಘ್ನಪರಂಪರೆಗಳನ್ನು ದಾಟಲು ಎಂತಹ ಸಾಹಸವನ್ನು ಮಾಡಬೇಕು? ಹೀಗೆ ಅತ್ಯಂತ ದುರ್ಲಭವಾದ ಸ್ಥಾನವನ್ನು ಸ್ವಪ್ರಯತ್ನ ವಿಶೇಷದಿಂದಲೂ, ಸ್ವಪ್ರತಿಭಾಮಹಿಮಾತಿಶಯದಿಂದಲೂ ಸಂಪಾದಿಸಿ ತಮ್ಮ ವಾಗ್ಝರಿಯಿಂದ ಪಾರ್ಲಿಮೆಂಟಿನ ಮೆಂಬರುಗಳನ್ನು ಆಶ್ಚರ್ಯಸಾಗರ ಮಗ್ನರಾಗುವಂತೆ ಮಾಡುವುದು ಮಾನವಪ್ರಯತ್ನದ ಪರಕಾಷ್ಠೆಯನ್ನು ವ್ಯಕ್ತಗೊಳಿಸುವುದು. ನೌರೋಜಿಯವರ ನಿರರ್ಗಳವಾದ ವಕ್ತೃತ್ವವನ್ನೂ ಅಪ್ರತಿಹತವಾದ ಮೇಧಾಶಕ್ತಿಯನ್ನೂ, ಆರ್ಥಿಕ ಜ್ಞಾನಾನುಭವವನ್ನೂ, ದೇಶಭಕ್ತಿ, ರಾಜಭಕ್ತಿಗಳನ್ನೂ ನೋಡಿದ ಪಾರ್ಲಿಮೆಂಟಿನ ಸಭಿಕರು ಇವರಲ್ಲಿ ಬಹು ಗೌರವವನ್ನಿಟ್ಟರು.

ಪಾರ್ಲಿಮೆಂಟಿನಲ್ಲಿ ದಾದಾಭಾಯಿಯವರು ಚರ್ಚಿಸಿದ ಕೆಲವು ಮುಖ್ಯಾಂಶಗಳು ಸರ್ವಜನಾದರಣೀಯಗಳಾಗಿದ್ದುವು.

"ಭಾರತೀಯರು ತಮ್ಮ ಉದ್ಧಾರಕ್ಕೆ ಮಾಡುವ ಸತ್ಪ್ರಯತ್ನಗಳು ಫಲಿಸದಿರಬಹುದು. ಆದರೂ ಭರತಖಂಡದ ಅಭಿವೃದ್ಧಿಯು ಕ್ರಮಕ್ರಮವಾಗಿ ಸಾವಕಾಶವಾಗಿಯೇ ನಡೆಯಲಿ. ಬ್ರಿಟಿಷ್ ಜನಗಳಲ್ಲಿ ನಾವು ನಿರ್ಧರವಾದ ನಂಬುಗೆಯನ್ನಿಟ್ಟಿದ್ದರೆ ಅವರ ನ್ಯಾಯ ಗೌರವ ವಿಷಯಗಳಲ್ಲಿ ಯಾವ ಸಂಶಯವನ್ನೂ ಹೊಂದಬೇಕಾಗಿಲ್ಲ. ಭರತಖಂಡದ ಮತ್ತು ಇಂಗ್ಲೆಂಡ್ ರಾಜ್ಯದ



ಸಂಬಂಧವು ಅವಿಚ್ಛಿನ್ನವಾದುದು. ಇದರಿಂದಲೇ ಈ ಎರಡು ರಾಷ್ಟ್ರಗಳ ಶ್ರೇಯಸ್ಸು ವೃದ್ಧಿಯಾಗಬೇಕು. ಭರತಖಂಡದ ರಾಜ್ಯದಾಡಳಿತದ ವಿಚಾರವನ್ನು ಈ ಘನಮಂದಿರದ ಮುಂದೆ ತಂದಿಡಲು ಅಪೇಕ್ಷಿಸುವೆನು. ಇದರ ನ್ಯಾಯವಾದ ವಿಚಾರಗಳನ್ನು ನಿಷ್ಪಕ್ಷಪಾತದಿಂದಲೂ ಪ್ರೀತಿಯಿಂದಲೂ ವಿಚಾರಮಾಡಿ ತೃಪ್ತಿಕರವಾದ ನಿರ್ಣಯಗಳನ್ನು ಮಾಡುವಿರಿ ಎಂದು ನಂಬಿರುವೆನು."

ದಾದಾಭಾಯಿಯವರು ಪಾರ್ಲಿಮೆಂಟಿನ ಸಭಿಕರಾದುದರಿಂದಲೇ ಭಾರತೀಯರ ವಿಚಾರಗಳಲ್ಲಿ ಆಂಗ್ಲಜನರಿಗೆ ಆಸಕ್ತಿ ಹುಟ್ಟಿದುದು. ಇವರು ಸರ್, ವಿಲಿಯಂ ವೆಡ್ಡರ್‌ಬರ್ನ್ ಮತ್ತು ಡಬ್ಲಿಯು. ಎಸ್. ಕೇನ್ ಮೊದಲಾದವರ ಸಾಹಾಯ್ಯದಿಂದ "ಇಂಡಿಯನ್ ಪಾರ್ಲಿಮೆಂಟರಿ ಕಮಿಟಿ" ಯನ್ನು ಸ್ಥಾಪಿಸಿ ಇದರಿಂದ ಭರತಖಂಡದ ಶ್ರೇಯಸ್ಸನ್ನು ನೆಲೆಗೊಳಿಸಿದರು. ಈ ಕಮಿಟಿಯಿಂದಾದ ಅನೇಕ ಮಹೋಪಕಾರಗಳಲ್ಲಿ ಭಾರತೀಯರು ಐ. ಸಿ. ಎಸ್. ಪರೀಕ್ಷೆಗೆ ಸೇರಲು ಅವಕಾಶವಾದುದೇ ಮುಖ್ಯವಾಗಿದೆ.

## ಮರಳಿ ರಾಷ್ಟ್ರೀಯ ಸಭಾಧ್ಯಕ್ಷರಾದುದು

ಲಾಹೋರಿನಲ್ಲಿ ನಡೆದ 9 ನೆಯ ರಾಷ್ಟ್ರೀಯ ಮಹಾಸಭಾಧ್ಯಕ್ಷತೆಯನ್ನಲಂಕರಿಸಲು ಭಾರತೀಯರಿಂದ ಪುನಃ ಆಹ್ವಾನಿಸಲ್ಪಟ್ಟು, ಮರಳಿ 1892 ರಲ್ಲಿ ಇಂಗ್ಲೆಂಡಿನಿಂದ ಭರತಖಂಡಕ್ಕೆ

Digitized by ROJA MUTHIAH RESEARCH LIBRARY

ಬಂದಾಗ ಬೊಂಬಾಯಿಯಿಂದ ಲಾಹೋರಿನವರೆಗೂ ರೇಯ್ಲ್ವೆಯ ನಿಲ್ದಾಣಗಳಲ್ಲಿ ನೌರೋಜಿಯವರಿಗೆ ನಡೆದ ಅಭೂತಪೂರ್ವವಾದ ಸನ್ಮಾನವು ಚಿರಸ್ಮರಣೀಯವಾಗಿದ್ದಿತು. ಲಾಹೋರಿನಲ್ಲಿ ರೇಯ್ಲ್ವೆಯ ನಿಲ್ದಾಣದಿಂದ ಅವರ ಬೀಡಾರದವರೆಗೂ ಜನರೇ ಅವರು ಕುಳಿತ ಗಾಡಿಯನ್ನು ಎಳೆದುಕೊಂಡುಹೋಗಿ ತಮ್ಮ ಚಿರಕೃತಜ್ಞತೆಯನ್ನು ವ್ಯಕ್ತಗೊಳಿಸಿದರು. ಈ ಬಗೆಯಾದ ಗೌರವವನ್ನು ಭಾರತೀಯರಾದ ನಾವು ಶ್ಲಾಘಿಸುವುದಿರಲಿ. ನೌರೋಜಿಯವರ ಶ್ರೇಷ್ಠತ್ವವನ್ನೂ, ಐರೋಪ್ಯರಾಷ್ಟ್ರದ ಮುಖ್ಯಪತ್ರಿಕೆಗಳೆಲ್ಲವೂ ತುಂಬಾ ಶ್ಲಾಘಿಸಿರುವುವು.

ಅನಂತರದಲ್ಲಿ ದಾದಾಭಾಯಿಯವರು ಭರತಖಂಡದ ಆಯವ್ಯಯ ವಿಚಾರವನ್ನು ಕ್ರಮಗೊಳಿಸಲು "ರಾಯಲ್ ಕಮಿಷನ್" ಎನ್ನುವ ಸಂಘವೊಂದನ್ನು ಸ್ಥಾಪಿಸಿ ಅದರಲ್ಲಿ ತಾವೂ ಒಬ್ಬರು ಸಭಿಕರಾಗಿದ್ದರು. ಈ ಸಂಘವೇ ಕೆಲವು ಕಾಲದ ಮೇಲೆ "ವೆಲ್‌ಬಿ ಕಮಿಷನ್" ಎನ್ನುವ ಹೆಸರನ್ನು ಪಡೆದಿತು. ಅಲ್ಲಿನ ಸಂಶಯ ವಿಚಾರಗಳಲ್ಲಿ ತಾವೇ ಸಾಕ್ಷಿಭೂತರಾಗಿ ನಿಂತು ಇಲ್ಲಿನ ಸ್ಥಿತಿಗತಿಗಳನ್ನೆಲ್ಲಾ ಬಲು ಚೆನ್ನಾಗಿ ವಿವರಿಸುತ್ತ ಬಂದುದರಿಂದ ಇವರ ಹೃದಯಂಗಮವಾದ ಚರ್ಚೆಗಳೇ ಭರತಖಂಡದ ಅರ್ಥಿಕಶಾಸ್ತ್ರವಿದ್ಯಾರ್ಥಿಗೆ ಸ್ವಾರಾಜ್ಯದ ವಿಚಾರಕ್ಕೆ ಸಾಕಾದಷ್ಟು ವಿಷಯಗಳನ್ನು ಒದಗಿಸಿದಂತಾದುವು.



1833 ರಲ್ಲಿ ಪಾರ್ಲಿಮೆಂಟಿನಲ್ಲಿಯೂ 1858 ರಲ್ಲಿ ಮಹಾರಾಜ್ಞಿಯವರ ಪ್ರಸಿದ್ಧಪತ್ರಿಕೆಯಲ್ಲಿಯೂ ಭಾರತೀಯರಿಗಾಗಿ ಮಾಡಿದ ವಾಗ್ದಾನಗಳು ಕ್ರಮವಾಗಿ ಆಚರಣೆಗೆ ತಾರದೇ ಇರುವುದೇ ಭರತಖಂಡದ ದರಿದ್ರಾವಸ್ಥೆಗೆ ಮುಖ್ಯ ಕಾರಣವೆಂದು ಇವರು ಬಹು ವಾದಿಸುತ್ತಿದ್ದರು. ಅನೇಕವಿಷಯಗಳಲ್ಲಿ ಬ್ರಿಟಿಷರ ಆಳಿಕೆಯು ಸಮರ್ಪಕವಾಗಿದ್ದರೂ, ರಾಜಕೀಯಾರ್ಥಿಕವಿಚಾರಗಳಲ್ಲಿ ಮಟ್ಟಿಗೆ ಔದಾಸೀನ್ಯವನ್ನು ತೋರಿಸಿರುವುದರಿಂದ ಭಾರತೀಯರ ದಾರಿದ್ರ್ಯವು ಹತವಾಗುವುದಕ್ಕೆ ತಡೆಯಾಗಿದೆಯೆಂದು ನಿದರ್ಶನಗಳಿಂದ ವಿವರಿಸುತ್ತಿದ್ದರು. ಅಲ್ಲದೆ ಪ್ರತಿಯೊಬ್ಬ ಭಾರತೀಯನ ವಾರ್ಷಿಕಾದಾಯವು ಹೆಚ್ಚಬೇಕು. ಭರತಖಂಡದ ಕಂದಾಯದ ಹಣವನ್ನು ಭರತಖಂಡಕ್ಕೇ ವಿನಿಯೋಗಿಸಬೇಕು. ಅದು ಪರದೇಶದ ಸೈನ್ಯಕ್ಕಾಗಿ ಉಪಯೋಗಿಸಕೂಡದು. ವ್ಯಾಪಾರದ ಮತ್ತು ವ್ಯವಸಾಯದ ಅಭಿವೃದ್ಧಿಗೆ ತಕ್ಕ ಸನ್ನಾಹಗಳು ನಡೆಯಬೇಕು; ಎಂದು ಅಡಿಗಡಿಗೂ ಬಿಡದೆ ಬಲು ಬಿಗುಪಟ್ಟಿನಿಂದ ವಾದಿಸುತ್ತಿದ್ದರು.

### ನೌರೋಜಿಯವರ ಮುಖ್ಯ ಕಾರ್ಯಗಳು.

ಭರತಖಂಡದ ಶ್ರೇಯೋಭಿವೃದ್ಧಿಗಾಗಿ ನೌರೋಜಿಯವರು ಎಷ್ಟೋ ಕಷ್ಟನಷ್ಟಗಳನ್ನು ಅನುಭವಿಸಿದರೂ ತಕ್ಕ ಸಾಹಸ ಪ್ರತಿಭಾಶಕ್ತಿಗಳಿಂದ ತಮ್ಮ ಇಷ್ಟಾರ್ಥವನ್ನು ತಕ್ಕ

Digitized by ROJA MUTHIAH RESEARCH LIBRARY

ಮಟ್ಟಿಗೆ ಸಾಧಿಸಿ ಧನ್ಯರಾದರೆಂದೇ ಹೇಳುವುದರಲ್ಲಿ ಅಡ್ಡಿಯಿಲ್ಲ. ಅವರು ಮಾಡಿದ ಕೆಲಸಗಳನ್ನೆಲ್ಲಾ ವಿವರಿಸಲು ಈ ಸಣ್ಣ ಪುಸ್ತಕದಲ್ಲಿ ಸಾಧ್ಯವಲ್ಲ. ಸಂಗ್ರಹವಾಗಿ ಹೇಳುವುದಾದರೆ ಈ ಕೆಳಗಣ ವಿಷಯಗಳನ್ನು ಸೂಚಿಸಬಹುದು.

1 ಐ. ಸಿ. ಎಸ್. ಪರೀಕ್ಷೆಗೆ ಭಾರತೀಯರನ್ನು ಸೇರಿಸಬೇಕೆಂದೂ, ಈ ಪರೀಕ್ಷೆಯು ಇಂಗ್ಲೆಂಡಿನಲ್ಲಿಯೂ ಭರತಖಂಡದಲ್ಲಿಯೂ ಏಕಕಾಲದಲ್ಲಿ ನಡೆಯಬೇಕೆಂದೂ ಸಾಹಸಪಟ್ಟರು. ಆದರೆ ಅವುಗಳಲ್ಲಿ ಮೊದಲನೆಯದು ಸಿದ್ಧಿಸಿತು. ಎರಡನೆಯದು ಈಡೇರಲಿಲ್ಲ.

2 ಭರತಖಂಡದ ಆರ್ಥಿಕ ಸ್ಥಿತಿಯನ್ನೂ ರಾಜ್ಯದ ಆಳಿಕೆಯ ಗುಣಾವಗುಣಗಳನ್ನೂ ವ್ಯಕ್ತಗೊಳಿಸುವ ಒಂದೆರಡು ಗ್ರಂಥಗಳನ್ನು ವಿರಚಿಸಿದರು.

3 ಸ್ತ್ರೀವಿದ್ಯಾಪ್ರಚಾರಕ್ಕಾಗಿ ಬೊಂಬಾಯಿಯಲ್ಲಿ ಒಂದು ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಿದರು. ಈ ಮೇಲ್ಪಂಕ್ತಿಯಿಂದ ಬೊಂಬಾಯಿ ಪ್ರಾಂತದ ನಾನಾಸ್ಥಳಗಳಲ್ಲಿ ಅನೇಕ ಬಾಲಿಕಾ ಪಾಠಶಾಲೆಗಳು ವೃದ್ಧಿಗೊಳಿಸಲ್ಪಟ್ಟುವು. ಇದರಿಂದ " ಸ್ತ್ರೀವಿದ್ಯಾಪ್ರಚಾರಕ " ರೆನ್ನುವ ಬಿರುದು ಇವರಿಗೆ ಸಲ್ಲುವಂತಾಯಿತು.

4 ಭಾರತೀಯರ ಶ್ರೇಯೋವೃದ್ಧಿಗಾಗಿಯೇ ಇಂಗ್ಲೆಂಡಿ



ನಲ್ಲಿ ' ಇಂಡಿಯಾ, ' ' ಈಸ್ಟ್ ಇಂಡಿಯಾ, ' ' ವೆಲ್ಬಿ ಕಮಿಷನ್ ' ಮೊದಲಾದ ಸಂಘಗಳು ಇವರಿಂದ ಸ್ಥಾಪಿತವಾದುವು.

5 ಭರತಖಂಡದ ರಾಷ್ಟ್ರೀಯ ಮಹಾಸಭೆಯನ್ನು ಮೊದಲಿನಿಂದಲೂ ಪ್ರೋತ್ಸಾಹಿಸಿ ಕಾಪಿಡುತ್ತೆ, ವೃದ್ಧಿಗೆ ತಂದ ಮಹನೀಯರಲ್ಲಿ ಇವರೂ ಒಬ್ಬರು ಪ್ರಮುಖರಾಗಿದ್ದರು. ಇದರಿಂದಲೇ ಈ ಸಭೆಗೆ ಇವರು ಮೂರು ಬಾರಿ ಅಧ್ಯಕ್ಷರಾಗಿ ಗೌರವಿಸಲ್ಪಟ್ಟರು.

## ಉ ಪ ದೇ ಶ

ದಾದಾಭಾಯಿ ನೌರೋಜಿಯವರು ಆಗಾಗ ಭಾರತೀಯರ ವಿಷಯದಲ್ಲಿ ಆಡುತ್ತಿದ್ದ ಮಾತುಗಳಲ್ಲಿ ಕೆಲವು ಉಪದೇಶಾರ್ಹವಾದುವುಗಳಾಗಿದ್ದುವು. ಪಾಠಕರಿಗೆ ದಿಙ್ಮಾತ್ರವಾದರೂ ಅದನ್ನು ಪ್ರದರ್ಶನಮಾಡಬೇಕೆಂದು ಕುತೂಹಲಬಡುವುದು ಅಪ್ರಸ್ತುತವಲ್ಲ.

" ಭಾರತೀಯರ ಬಡತನವು ಹೇಗಾದರೂ ದೂರವಾಗಬೇಕು. ಈ ದೇಶದಿಂದ ಪರದೇಶಕ್ಕೆ ಸಾಗುವ ಅಪಾರವಾದ ದ್ರವ್ಯವನ್ನು ನಿಬಂಧನಗಳಿಂದ ತಡೆಯಬೇಕು. ಇಲ್ಲಿನ ನದಿಗಳಿಗೆ ಅಣೆಗಟ್ಟುಗಳನ್ನು ಹಾಕಿ ಕಾಲುವೆಗಳಿಂದ ವ್ಯವಸಾಯವನ್ನು ಹೆಚ್ಚಿಸಬೇಕು. ಕೈಗಾರಿಕೆಯ ಪಾಠಶಾಲೆಗಳನ್ನು ಸ್ಥಾಪಿಸಿ ಕೈಗಾರಿಕೆಯ ವ್ಯಾಪಾರವನ್ನು ಹೆಚ್ಚಿಸಿ ಸ್ವದೇಶವಸ್ತುಗಳ

Digitized by ROJA MUTHIAH RESEARCH LIBRARY

ಮಾರಾಟವನ್ನು ಪ್ರೋತ್ಸಾಹಿಸಿ ಹೆಚ್ಚಿಸಲು ಹಗಲಿರುಳೂ ಶ್ರಮ
ಪಡಬೇಕು.

ಸಕ್ರಮವಾದ ಸ್ವಾರಾಜ್ಯವನ್ನು ಸಾಧಿಸುವುದೇ ಭಾರತೀ
ಯರಿಗೆ ಮುಖ್ಯವಾದ ಗುರಿ. ಇದರಿಂದಲೇ ಭಾರತೀಯರ ಅನಂ
ತಾನಂತವಾದ ಕಷ್ಟಪರಂಪರೆಗಳು ಪರಿಹಾರವಾಗುವುವು.
ಭಾರತೀಯರ ಕಷ್ಟಸುಖಗಳನ್ನು ಸಾಮ್ರಾಜ್ಯದ ಸರ್ಕಾರಕ್ಕೆ
ಅರಿಕೆಮಾಡುವುದು ಸುಲಭವಲ್ಲ. ಬುದ್ಧಿವಂತರಾದ ಭಾರತೀಯ
ವಕ್ತೃಗಳು ಇಂಗ್ಲೆಂಡಿಗೆ ಹೋಗಿ ಪಾರ್ಲಿಮೆಂಟಿನ ಸಭ್ಯರಲ್ಲಿ ನಿಜ
ತ್ವವನ್ನು ವ್ಯಕ್ತಗೊಳಿಸಿ ಇಷ್ಟಾರ್ಥಸಿದ್ಧಿಯನ್ನು ಪಡೆಯಬೇಕಾ
ದುದು ಅವಶ್ಯಕರ್ತವ್ಯವೆನ್ನುವುದನ್ನು ಹೃದಯಂಗಮವಾಗಿ ಬೋ
ಧಿಸುವುದರಲ್ಲಿ ತಾವು ಶ್ರಮಗೊಂಡಂತೆ ಭಾರತೀಯರೂ ಶ್ರಮ
ಗೊಳ್ಳಬೇಕು. ಇಂಗ್ಲೀಷರ ಆಳಿಕೆಯೇ ಭರತಖಂಡಕ್ಕೆ ಹಿತವು.
ಇಲ್ಲಿನ ಲೋಪಗಳು ಇವರ ನ್ಯಾಯ ಮತ್ತು ನಿಷ್ಪಕ್ಷಪಾತತೆಗ
ಳಿಂದ ತೊಲಗುವುದರಲ್ಲಿ ಸಂದೇಹವಿಲ್ಲ.

## ನೌರೋಜಿಯವರ ವಾರ್ಧಕ್ಯ

1906 ರಲ್ಲಿ ರಾಷ್ಟ್ರೀಯಮಹಾಸಭೆಯು ನಡೆದುಹೋದ
ಬಳಿಕ ನೌರೋಜಿಯವರು ರಾಜಕೀಯ ರಣರಂಗದಿಂದ ತಮ್ಮ
ಕಾಲನ್ನು ಹಿಂದೆಗೆದು, ಬೊಂಬಾಯಿಗೆ ಸಮೀಪದಲ್ಲಿ ಇರುವ



ವಾರ್ಸೋವಾ ಎನ್ನುವ ಗ್ರಾಮದಲ್ಲಿ ವಾಸಿಸುತ್ತಿದ್ದರು. ಆದರೆ
ಅಲ್ಲಿಯೂ ಭಾರತೀಯರ ಶ್ರೇಯಶ್ಚಿಂತನೆಯನ್ನು ಮರೆಯದೆ
ಅದೊಂದು ವ್ರತವನ್ನಾಗಿಯೇ ಭಾವಿಸಿದ್ದರು. ಇವರ ವರ್ಧಂ
ತ್ಯುತ್ಸವಗಳು ಆಗಾಗ ಭರತಖಂಡದಲ್ಲಿ ಎಷ್ಟೋ ಉತ್ಸಾಹದಿಂದ
ನಡೆದಿವೆ. ಆಗ ಎಷ್ಟೋ ಅತ್ಯುತ್ತಮವಾದ ಉಪದೇಶಗಳನ್ನೂ
ಮಾಡಿರುವರು. ಭಾರತೀಯರೆಲ್ಲರೂ ಇವರನ್ನು "ರಾಜಕೀಯ
ವಿದ್ಯಾಗುರು" ಎಂದು ಕರೆಯುತ್ತಿದ್ದರು. ಸರ್ವಮತೀಯರ
ಸನ್ಮಾನಕ್ಕೂ ಪಾತ್ರರಾಗಿದ್ದ ಇವರನ್ನು ಆಂಗ್ಲೇಯರೂ ಗೌರವಿ
ಸುತ್ತಿದ್ದುದು ಆಶ್ಚರ್ಯವಲ್ಲ. ಬೊಂಬಾಯಿ ಗವರ್ನರುಗಳಲ್ಲಿ ಅನೇ
ಕರು ಇವರ ಮನೆಗೆಹೋಗಿ ಕುಶಲಪ್ರಶ್ನೆಗಳನ್ನು ಮಾಡುತ್ತಿದ್ದರು.
ವೈಸರಾಯಿಯವರಾದ ಲಾರ್ಡ್ ಹಾರ್ಡಿಂಗ್ ಪ್ರಭುಗಳುಇವರ
ಭವನಕ್ಕೆ ಬಿಜಯಂಗೆಯ್ದು ಕ್ಷೇಮಲಾಭಗಳನ್ನು ತಿಳಿದು ಸಂಭಾ
ಷಿಸಿದರು. ಇವರ ಅನ್ಯಾದೃಶವಾದ ಬುದ್ಧಿ ಶಕ್ತಿಗೂ, ದಿಗಂತ
ವಿಶ್ರಾಂತವಾದ ಕೀರ್ತಿಗೂ ಮೆಚ್ಚಿದ ಬೊಂಬಾಯಿ ವಿಶ್ವವಿದ್ಯಾ
ಲಯದವರು ನೌರೋಜಿಯವರಿಗೆ ಅತ್ಯುಚ್ಚವಾದ LL. D
ಎನ್ನುವ ಪ್ರಶಸ್ತಿಯನ್ನು ದಯಪಾಲಿಸಿದ್ದರು.

ಹೀಗೆ ಜ್ಞಾನದಲ್ಲಿಯೂ, ಗೌರವದಲ್ಲಿಯೂ, ದೇಶಸೇವೆ
ಯಲ್ಲಿಯೂ, ವಯಸ್ಸಿನಲ್ಲಿಯೂ, ಅತ್ಯುನ್ನತಿಯನ್ನೇರಿದ ದಾದಾ
ಭಾಯಿಯವರಿಗೆ ವಾರ್ಧಕಾವಸ್ಥೆಗನುಗುಣವಾದ ನೀರಸಸ್ಥಿತಿಯು

Digitized by ROJA MUTHIAH RESEARCH LIBRARY

ದೇಹಕ್ಕೆ ಪ್ರಾಪ್ತವಾಗಲು 1917 ನೆಯ ಜೂನ್ 30ರಲ್ಲಿ ಪರಮ ಪದವನ್ನೇರಿದರು. ಆಗ ಭಾರತೀಯರಿಗಾದ ದುಃಖಾತಿರೇಕವು ಬಣ್ಣಿಸಲಸದಳವಾಯಿತು. ಅವರ ಅಪರಸಂಸ್ಕಾರವು ಶಾಸ್ತ್ರ ಸಂಪ್ರದಾಯಾನುಸಾರವಾಗಿ ನಡೆದಿತು. ಶ್ಮಶಾನಭೂಮಿಯ ವರೆಗೆ ಅವರನ್ನು ಹಿಂಬಾಲಿಸಿದ್ದ ಜನಸಮುದಾಯವು ಎಪ್ಪತ್ತೈದು ಸಾಸಿರಮಂದಿಯೆಂದರೆ ನೌರೋಜಿಯವರ ಮಹಿಮಾತಿಶಯವು ಎಂತಹುದೋ ಅದು ಎಲ್ಲರಿಗೂ ಗೊತ್ತಾಗುವುದು. ಇಂತಹ ಅಪರಸಂಸ್ಕಾರಸಂದರ್ಭದಲ್ಲಿ ಇಂತಹ ಜನಸ್ತೋಮವು ಸೇರಿ ದುದು ಬೊಂಬಾಯಿನಗರದಲ್ಲಿ ಇದೇ ಮೊದಲನೆಯದೆನಿಸಿತು.

ಫಲಿತ ನೀತಿಗಳು

ದಾದಾಭಾಯಿ ನೌರೋಜಿಯವರ ವಿಷಯದಲ್ಲಿ ನಾವು ಕಲಿಯಬೇಕಾದ ಪಾಠಗಳು ಎಷ್ಟೋ ಇವೆ. ಅದನ್ನು ನಮ್ಮ ಮೈಸೂರ್ ಸ್ಟಾರ್ ಪತ್ರಿಕಾ ಕರ್ತರು ತಮ್ಮ ಪತ್ರಿಕೆಯಲ್ಲಿ ಬಲು ಚೆನ್ನಾಗಿ ಪ್ರಕಟಿಸಿರುವರು. ಅದನ್ನೇ ಅನುವದಿಸಿದರೆ ಸಾಕೆಂದು ಅವರಿಗೆ ಚಿರಕೃತಜ್ಞತೆಯನ್ನು ಸಮರ್ಪಿಸುವುದರ ವ್ಯಾಜದಿಂದ ಅದನ್ನು ಈ ಕೆಳಗೆ ಬರೆದು ಈ ಸಣ್ಣ ಪುಸ್ತಕವನ್ನು ಮುಗಿಸ ಬೇಕೆಂದು ಉದ್ದೇಶಿಸಿದುದಾಯಿತು.

"ಹುಟ್ಟಿದ ಪ್ರಾಣಿಗೆ ಮರಣವು ಎಂದಾದರೊಂದು ದಿನ ದಲ್ಲಿ ಸಿದ್ಧವು. ನೌರೋಜಿಯವರು ಗೋಪಾಲಕೃಷ್ಣ ಗೋಖಲೆ

Digitized by ROJA MUTHIAH RESEARCH LIBRARY



A 2269

ಯವರಂತೆ ಅಕಾಲದಲ್ಲೇನೂ ದೈವಾಧೀನರಾಗಲಿಲ್ಲ. ಈ ಮಹನೀಯರು ಪೂರ್ಣವಯಸ್ಸಿನವರೆಗೂ ಬಾಳಿದರು. ಪುರುಷ ಜನ್ಮದ ಪುರುಷಾರ್ಥದಲ್ಲಿ ಉತ್ತಮ ಭಾಗವಾದ ದೇಶಸೇವಾ ರೂಪ ತಪಸ್ಸನ್ನಾಚರಿಸಿ ತಮ್ಮ ಜನ್ಮವನ್ನು ಧನ್ಯವನ್ನಾಗಿ ಮಾಡಿ ಕೊಂಡು ಅಜರಾಮರವಾದ ಯಶಃಕಾಯವನ್ನು ಭೂತಲದ ಲ್ಲಿಟ್ಟು ನಶ್ವರವಾದ ಭೌತಿಕ ಕಾಯವನ್ನು ಉಳಿದರು. ಅವರಲ್ಲಿದ್ದ ಶಮದಮಾದಿ ಸದ್ಗುಣಗಳೂ, ಅಚಲವಾದ ಕಾರ್ಯತತ್ಪರತೆಯೂ ನಿಶ್ಚಿತವಾದ ದೇಶಭಕ್ತಿಯೂ, ಸರ್ವಧರ್ಮಸಾಧಕವಾದ ದೇಹಾ ರೋಗ್ಯ ರಕ್ಷಣ ಚಾತುರ್ಯವೂ, ನಮ್ಮ ವರ್ಧಿಷ್ಣುಗಳಾದ ದೇಶ ಪುತ್ರರಲ್ಲೆಲ್ಲಾ ಅಂಶಾಂಶ ರೂಪವಾಗಿಯಾದರೂ ಪ್ರತಿಫಲಿಸುತ್ತಾ ಬಂದರೆ ಆ ವೃದ್ಧಪಿತಾಮಹರು ನಮಗಾಗಿ ಮಾಡಿದ ಉಪಕಾರಕ್ಕೆ ಯತ್ಕಿಂಚಿತ್ಕೃತಜ್ಞತೆಯನ್ನಾದರೂ ಸಮರ್ಪಿಸಿದಂತಾಗುವುದು. ಭರತಖಂಡದಲ್ಲಿ ಇವರನ್ನು ವಿದ್ಯೆಯಲ್ಲೂ, ಮೇಧಾವಿತೆಯಲ್ಲೂ, ಮಿಂಚಿಸಿದವರು ಎಷ್ಟೋ ಮಂದಿಗಳಿರಬಹುದು. ಆದರೆ ಇವ ರಂತೆ ಬಿಗುಪಟ್ಟಿನಿಂದಲೂ ಸಹನೆಯಿಂದಲೂ ಅಪ್ರಮತ್ತತೆಯಿಂ ದಲೂ ದೂರಾಲೋಚನೆಯಿಂದಲೂ, ದೇಶಸೇವೆಯನ್ನು ಚಿರ ಕಾಲದ ವರೆಗೆ ನಡೆಯಿಸಿದವರು ಮತ್ತೊಬ್ಬರಿಲ್ಲ. ಭಾರತಮಾ ತೆಯ ದುರದೃಷ್ಟದಿಂದ ಒಂದೆರಡು ವರ್ಷಗಳಿಂದೀಚೆಗೆ ಇಂತಹ

ಪುಣ್ಯಶರೀರಿಗಳಲ್ಲಿ ಪ್ರಮುಖರಾದವರನ್ನೇ ಕಳೆದುಕೊಂಡು ಕಷ್ಟನಷ್ಟಗಳನ್ನನುಭವಿಸುವ ದುರ್ಯೋಗವು ನಮಗೆ ಪ್ರಾಪ್ತವಾಯಿತಲ್ಲವೆ! ಈಶೇಚ್ಛೆಗೆ ಪ್ರತಿಯಿಲ್ಲ."

ನಾವೆಲ್ಲರೂ ನೌರೋಜಿಯವರ ನಡೆನುಡಿಗಳನ್ನು ಆದರ್ಶವಾಗಿಟ್ಟುಕೊಂಡು ದೇಶಸೇವಾಧುರಂಧರರಾಗಿ ಬಾಳುವಂತೆ ಭಗವಂತನು ಅನುಗ್ರಹಿಸಲಿ.

* ಇತಿ ಸರ್ವಂ ಶಿವಂ *

Digitized by ROJA MUTHIAH RESEARCH LIBRARY

**ದಿನಾಂಕ ಸೂಚಿ**

## ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

**ಸರಸ್ವತಿ ಭಂಡಾರ**

ವಿ. ಸೂ: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರು ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
|---|---|
| | |

ಲೇಖಕ: ರುದ್ರಪ್ಪ (ಜೆ) ( ).

ಶಿರೋನಾಮೆ: ದಾದಾಭಾಯಿ ನೌರೋಜಿಯವರ ಜೀವನ ಚರಿತ್ರವು.

ವ. ಸಂ: V,೩೮M25 N

ಕ್ರ. ಸಂ: 2262.

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY